CPMG / KA / BG-GPO / 13 / 2003-05

ಸುವರ್ಣ ಕರ್ನಾಟಕ -2006

# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ಪತ್ರಿಕೆ**

| ಭಾಗ - IVA | ಬೆಂಗಳೂರು, ಸೋಮವಾರ ಡಿಸೆಂಬರ್, ೧೯, ೨೦೦೫ (ಮಾರ್ಗಶಿರ ೨೮, ಶಕ ವರ್ಷ ೧೯೨೭) | ನಂ. ೨೧೭೩ |
|---|---|---|

**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಸಿಆಸುಇ:74:ಮಾಹಅ:2005 (ಭಾಗ-3), ಬೆಂಗಳೂರು, ದಿನಾಂಕ 17ನೇ ಡಿಸೆಂಬರ್ 2005**

1963ರ ಕರ್ನಾಟಕ ಅಧಿಕೃತ ಭಾಷಾ ಅಧಿನಿಯಮದ ಪ್ರಕರಣ 5ಎ ಇದರಲ್ಲಿನ ಅಧಿಕಾರವನ್ನು ಚಲಾಯಿಸಿ ಮಾನ್ಯ ಕರ್ನಾಟಕದ ರಾಜ್ಯಪಾಲರು ಅನುಮೋದಿಸಿರುವ ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ನಿಯಮಗಳು 2005 ಇದರ ಕನ್ನಡ ಭಾಷಾಂತರದ ಅಧಿಕೃತ ಪಾಠವನ್ನು ಸಾರ್ವಜನಿಕರ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಕೆ.ಆರ್. ಬಡಿಗೇರ್**

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಜನಸ್ಪಂದನ ಕೋಶ)

**ಕರ್ನಾಟಕ ಸರ್ಕಾರ**

**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಸಿಆಸುಇ:74:ಮಾಹಅ:2005 (ಭಾಗ-2) 2005, ಬೆಂಗಳೂರು, ದಿನಾಂಕ 11ನೇ ಅಕ್ಟೋಬರ್ 2005**

ಮಾಹಿತಿ ಪಡೆಯಲು ಹಕ್ಕು ಅಧಿನಿಯಮ, 2005ರ (2005ರ ಕೇಂದ್ರ ಅಧಿನಿಯಮ 22) 27ನೇ ಪ್ರಕರಣದ (1)ನೇ ಮತ್ತು (2)ನೇ ಉಪ ಪ್ರಕರಣಗಳಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:-

**1. ಹೆಸರು ಮತ್ತು ಪ್ರಾರಂಭ.**- (1) ಈ ನಿಯಮಗಳನ್ನು ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ನಿಯಮಗಳು, 2005 ಎಂದು ಕರೆಯತಕ್ಕದ್ದು.

(2) ಇವು ಸರ್ಕಾರಿ ರಾಜ್ಯ ಪತ್ರದಲ್ಲಿ ಅವುಗಳ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.**- ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(i) "ಅಧಿನಿಯಮ" ಎಂದರೆ, ಮಾಹಿತಿ ಪಡೆಯಲು ಹಕ್ಕು ಅಧಿನಿಯಮ, 2005 (2005ರ ಕೇಂದ್ರ ಅಧಿನಿಯಮ 22)

(ii) "ಪ್ರಕರಣ" ಎಂದರೆ, ಅಧಿನಿಯಮದ ಒಂದು ಪ್ರಕರಣ.

3. **4ನೇ ಪ್ರಕರಣದ ಅಡಿಯಲ್ಲಿ ಕೆಲವು ಇತರ ಮಾಹಿತಿ ಮುಂತಾದವುಗಳನ್ನು ಪ್ರಕಟಿಸುವುದು.**– (1)4(4)ನೇ ಪ್ರಕರಣದ ಅಡಿಯಲ್ಲಿಯ ಮಾಹಿತಿಯು, ಸಾರ್ವಜನಿಕರಿಗೆ ಸುಲಭವಾಗಿ ಲಭ್ಯವಾಗುವಂತಿರತಕ್ಕದ್ದು. ವಿವರಗಳು ಎಲ್ಲಿ ಲಭ್ಯವಿವೆ ಎಂಬುದನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಯು ಸೂಚನಾ ಫಲಕದ ಮೇಲೆ ಪ್ರದರ್ಶಿಸಿ ಸೂಚಿಸತಕ್ಕದ್ದು. ಅಲ್ಲದೇ, ಸಾರ್ವಜನಿಕ ಪ್ರಾಧಿಕಾರಿಗಳು, ಮಾಹಿತಿಯನ್ನು ಪ್ರಸಾರ ಮಾಡುವುದಕ್ಕಾಗಿ ಅಧಿನಿಯಮದ ಅಡಿಯಲ್ಲಿ ಉಪಬಂಧಿಸಲಾದ ಯಾವುದೇ ವಿಧಾನವನ್ನು ಅನುಸರಿಸಬಹುದು.

(2) ಹಾಗೆ ಪ್ರಸಾರ ಮಾಡಿದ ಮಾಹಿತಿಯು, ಸಂಬಂಧಪಟ್ಟ ಕಚೇರಿಗಳ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಮತ್ತು ಸಹಾಯಕ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ದೂರವಾಣಿ ಸಂಖ್ಯೆ, ಫ್ಯಾಕ್ಸ್ ಸಂಖ್ಯೆ ಮುಂತಾದವುಗಳನ್ನು ಒಳಗೊಂಡಿರತಕ್ಕದ್ದು.

4. **ಶುಲ್ಕ.**– (1) ಅಧಿನಿಯಮದ 6ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಮಾಹಿತಿಯನ್ನು ಪಡೆಯಲು ಇಚ್ಛಿಸುವ ಯಾವೊಬ್ಬ ವ್ಯಕ್ತಿಯು ನಮೂನೆ-ಎ ಯಲ್ಲಿ ಅಥವಾ ನಮೂನೆಯಲ್ಲಿ ನಿರ್ದಿಷ್ಟಪಡಿಸಿದ ಎಲ್ಲಾ ವಿವರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಒಳಗೊಂಡಂಥ ಇನ್ನಾವುದೇ ನಮೂನೆಯಲ್ಲಿ ಒಂದು ಅರ್ಜಿಯನ್ನು ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ ಅಥವಾ ಸಂದರ್ಭಾನುಸಾರವಾಗಿ ಸಹಾಯಕ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ ಇವರಿಗೆ 10/- ರೂಪಾಯಿಗಳ ಪ್ರಾರಂಭಿಕ ಶುಲ್ಕದೊಡನೆ ಸಲ್ಲಿಸತಕ್ಕದ್ದು. ಅಧಿನಿಯಮದ ಅಡಿಯಲ್ಲಿ ಕೋರಿಕೆಯನ್ನು ಸ್ವೀಕರಿಸುವ ಪ್ರತಿಯೊಬ್ಬ ಅಧಿಕಾರಿಯು ಒಂದು ಸ್ವೀಕೃತಿಯನ್ನು ನೀಡತಕ್ಕದ್ದು.

(2) (ಎ) 7ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಮಾಹಿತಿಯನ್ನು ನೀಡುವುದಕ್ಕಾಗಿ, ಎ4 ಅಳತೆಯ ಕಾಗದದ ಹಾಳೆಯಲ್ಲಿ ಪಡೆಯುವ ವಿಷಯಗಳ ಸಂಬಂಧದಲ್ಲಿ ಪ್ರತಿ ಪುಟಕ್ಕೆ 2/- ರೂಪಾಯಿಗಳಂತೆ ಶುಲ್ಕವನ್ನು ವಿಧಿಸತಕ್ಕದ್ದು.

(ಬಿ) 7ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಮಾಹಿತಿಯನ್ನು ನೀಡುವುದಕ್ಕಾಗಿ, ಭೂಪಟಗಳು, ನಕ್ಷೆಗಳು, ವರದಿಗಳು, ಆಂಶಿಕ ದಾಖಲೆ ಅಥವಾ ಯಾವುದೇ ತಾಂತ್ರಿಕ ಮಾಹಿತಿ ಅಥವಾ ನಮೂನೆ ಅಥವಾ ಮಾದರಿಗಳ ಸಂಬಂಧದಲ್ಲಿ ಪ್ರತಿಯೊಂದು ಸಂದರ್ಭದಲ್ಲಿ ಬಳಸಲಾದ ಶ್ರಮ ಮತ್ತು ಸಾಮಗ್ರಿಗಳ ವೆಚ್ಚಕ್ಕೆ ಅನುಸಾರವಾಗಿ ಪ್ರತಿಯೊಂದು ಸಂದರ್ಭದಲ್ಲಿ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯು ಸೂಕ್ತ ಶುಲ್ಕವನ್ನು ನಿಗದಿಪಡಿಸತಕ್ಕದ್ದು.

(ಸಿ) ದಾಖಲೆಗಳನ್ನು ಮತ್ತು ದಸ್ತಾವೇಜುಗಳನ್ನು ಪರಿಶೀಲಿಸುವ ಸಂಬಂಧದಲ್ಲಿ, ಮೊದಲ ಒಂದು ಘಂಟೆಗೆ ಯಾವುದೇ ಶುಲ್ಕವಿಲ್ಲ. ಮೇಲೆ 4(1) ರ ಅಡಿಯಲ್ಲಿ ನಿಯಮಿಸಲಾದಂತೆ ಪ್ರಾರಂಭಿಕ ಶುಲ್ಕದೊಡನೆ ಅರ್ಜಿಸಲ್ಲಿಸಿದ ವ್ಯಕ್ತಿಗಳಿಗೆ, ತದನಂತರದ ಪ್ರತಿ ಅರ್ಧ ಘಂಟೆಗೆ ಅಥವಾ ಅದರ ಭಾಗಕ್ಕೆ 20/- ರೂಪಾಯಿಗಳಂತೆ ಶುಲ್ಕವನ್ನು ವಿಧಿಸತಕ್ಕದ್ದು. ಕಾಮಗಾರಿಗಳ ಪರಿಶೀಲನೆಗಾಗಿ ನಿಯಮ 4(1)ರ ಅಡಿಯಲ್ಲಿ ನಿಯಮಿಸಲಾದಂಥ ಪ್ರಾರಂಭಿಕ ಶುಲ್ಕಕ್ಕೆ ಹೆಚ್ಚುವರಿಯಾಗಿ ಪ್ರತಿಯೊಂದು ಸಂದರ್ಭದಲ್ಲಿ ಬಳಸಲಾದ ಶ್ರಮ ಮತ್ತು ಸಾಮಗ್ರಿಗಳಿಗೆ ಅನುಗುಣವಾಗಿ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯು ಸೂಕ್ತ ಶುಲ್ಕವನ್ನು ನಿಗದಿಪಡಿಸತಕ್ಕದ್ದು.

(3) 7ನೇ ಪ್ರಕರಣದ (5)ನೇ ಉಪಪ್ರಕರಣದ ಅಡಿಯಲ್ಲಿ ಮಾಹಿತಿಯನ್ನು ನೀಡುವುದಕ್ಕಾಗಿ, ಮಾಹಿತಿಯನ್ನು ಡಿಸ್ಕೆಟ್ ಅಥವಾ ಫ್ಲಾಪಿ ಅಥವಾ ಸಿ.ಡಿ. ಅಥವಾ ಇನ್ನಾವುದೇ ವಿದ್ಯುನ್ಮಾನ ಸಾಧ್ಯದ ಮೂಲಕ ನೀಡಲು ಶುಲ್ಕವು 50/- ರೂಪಾಯಿಗಳು ಆಗಿರತಕ್ಕದ್ದು.

(4) ಶುಲ್ಕವನ್ನು, ರಾಜ್ಯ ಸಾರ್ವಜನಿಕ ಅಧಿಕಾರಿಯವರ ಹೆಸರಿನಲ್ಲಿ ಪಡೆದ ಇಂಡಿಯನ್ ಪೋಸ್ಟಲ್ ಆರ್ಡರ್ ಅಥವಾ ಡಿ.ಡಿ. ಅಥವಾ ಬ್ಯಾಂಕರ್ಸ್ ಚೆಕ್ ಅಥವಾ ಪೇ ಆರ್ಡರ್ ರೂಪದಲ್ಲಿ ಅಥವಾ ನಗದಾಗಿ ಅಥವಾ ಕರ್ನಾಟಕ ಆರ್ಥಿಕ ಸಂಹಿತೆ (ಕ.ಆ.ಸಂ.) ಅನುಸಾರವಾಗಿ ಖಜಾನೆಯಲ್ಲಿ ಸಂದಾಯ ಮಾಡುವ ಮೂಲಕ ಸಂಗ್ರಹಿಸತಕ್ಕದ್ದು.

(5) 7ನೇ ಪ್ರಕರಣದ (5)ನೇ ಉಪಪ್ರಕರಣದ ಪರಂತುಕದ ಅಡಿಯಲ್ಲಿ ವಿನಾಯಿತಿಯನ್ನು ಕ್ಲೇಮು ಮಾಡುವ ವ್ಯಕ್ತಿಯು, ಅವನು/ಅವಳು, ಬಡತನದ ರೇಖೆಗಿಂತ ಕೆಳಗಿರುವವರ ಪ್ರವರ್ಗಕ್ಕೆ ಸೇರಿರುವರೆಂದು ಸಂಬಂಧಪಟ್ಟ ಪ್ರಾಧಿಕಾರಿಯು ನೀಡಿದ ಸಿಂಧುವಾದ ಪ್ರಮಾಣ ಪತ್ರವನ್ನು ಒದಗಿಸತಕ್ಕದ್ದು.

5. **ರಾಜ್ಯ ಮಾಹಿತಿ ಆಯೋಗದ ಅಧಿಕಾರಿಗಳ ಮತ್ತು ನೌಕರರ ಸಂಬಳ ಮತ್ತು ಭತ್ಯೆಗಳು ಮತ್ತು ಸೇವಾ ಷರತ್ತುಗಳು.**– (1) ರಾಜ್ಯ ಮಾಹಿತಿ ಆಯೋಗದ ಅಧಿಕಾರಿಗಳು ಮತ್ತು ನೌಕರರಿಗೆ ಸಂದಾಯ ಮಾಡತಕ್ಕ ಸಂಬಳ ಮತ್ತು ಭತ್ಯೆಗಳು, ಸಮಾನ ದರ್ಜೆಯ ಹುದ್ದೆಗಳನ್ನು ಹೊಂದಿರುವ ಇತರ ರಾಜ್ಯ ಸರ್ಕಾರಿ ನೌಕರರ ಸಂಬಳ ಮತ್ತು ಭತ್ಯೆಗಳಿಗೆ ಸಮನಾಗಿರತಕ್ಕದ್ದು.

(2) ರಾಜ್ಯ ಸರ್ಕಾರಿ ನೌಕರರ ಸೇವಾ ಷರತ್ತುಗಳು ಮತ್ತು ಶಿಸ್ತಿಗೆ ಸಂಬಂಧಪಡುವ ನಿಯಮಗಳು, ಈ ನಿಯಮಗಳ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಮಾರ್ಪಾಡುಗಳಿಗೊಳಪಟ್ಟು, ರಾಜ್ಯ ಮಾಹಿತಿ ಆಯೋಗದ ನೌಕರರಿಗೆ ಯಥೋಚಿತ ಬದಲಾವಣೆಗಳೊಂದಿಗೆ ಅನ್ವಯವಾಗತಕ್ಕದ್ದು.

(3) ನೌಕರಿ ಭರ್ತಿಯನ್ನು ಕ.ನಾ.ಸೇ. (ಸಾಮಾನ್ಯ ನೇಮಕಾತಿ ನೌಕರಿ ಭರ್ತಿ) ನಿಯಮಗಳು, 1977ರ ಅಡಿಯಲ್ಲಿಯ ಉಪಬಂಧಗಳಿಗೆ ಅನುಸಾರವಾಗಿ, ರಾಜ್ಯದ ಯಾವುದೇ ಸಿವಿಲ್ ಸೇವೆಯಿಂದ ಅಥವಾ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಸಮಾನ ದರ್ಜೆಯ ಹುದ್ದೆಯನ್ನು ಹೊಂದಿರುವ ಸರ್ಕಾರಿ ನೌಕರರ ಪ್ರತಿಯೋಜನೆಯ ಮೂಲಕ ಅಥವಾ ಹೊರಗುತ್ತಿಗೆ ಮೂಲಕ ಮಾಡಿಕೊಳ್ಳತಕ್ಕದ್ದು:

ಪರಂತು ಹೊರಗುತ್ತಿಗೆಯು, ಸ್ವಚ್ಛತೆ ಕೆಲಸಗಾರರು, ಗೃಹ ನಿರ್ವಹಣೆ, ಗೃಹ ಪರಿಚಾರಕ ಮತ್ತು ಸುರಕ್ಷ ಗಾರ್ಡ್‌ಗಳ ಹುದ್ದೆಗಳಿಗೆ ಸೀಮಿತವಾಗಿರತಕ್ಕದ್ದು.

6. **19ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಅಪೀಲು.**- (1) ಸಾರ್ವಜನಿಕ ಪ್ರಾಧಿಕಾರವು, 19ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಅಪೀಲನ್ನು ಯಾರಿಗೆ ಸಲ್ಲಿಸತಕ್ಕದ್ದೋ ಆ ಅಧಿಕಾರಿಯ ಪದನಾಮವನ್ನು ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸತಕ್ಕದ್ದು.

(2) ಅಂಥ ಪ್ರತಿಯೊಂದು ಅಪೀಲು ಅರ್ಜಿಯ ಜೊತೆಯಲ್ಲಿ, ಯಾವ ಆದೇಶದ ವಿರುದ್ಧ ಅಪೀಲು ಸಲ್ಲಿಸಲಾಗುತ್ತಿದೆಯೋ ಆ ಆದೇಶದ ಪ್ರತಿ ಇರಿಸತಕ್ಕದ್ದು ಮತ್ತು ಅರ್ಜಿಯಲ್ಲಿ ಈ ಮುಂದಿನವುಗಳನ್ನು ನಿರ್ದಿಷ್ಟವಾಗಿ ತಿಳಿಸತಕ್ಕದ್ದು.

(i) ಅರ್ಜಿದಾರನ ಹೆಸರು ಮತ್ತು ವಿಳಾಸ ಮತ್ತು ಯಾರ ವಿರುದ್ಧ ಅಪೀಲು ಸಲ್ಲಿಸಲಾಗುತ್ತದೆಯೋ ಆ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಸಂಬಂಧಿಸಿದ ವಿವರಗಳು;

(ii) ಯಾರ ವಿರುದ್ಧ ಅಪೀಲು ಸಲ್ಲಿಸಲಾಗುತ್ತದೆಯೋ ಆ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯ ಆದೇಶ ಯಾವುದಾದರು ಇದ್ದರೆ, ಅದನ್ನು ಸ್ವೀಕರಿಸಿದ ದಿನಾಂಕ;

(iii) ಅಪೀಲಿಗೆ ಕಾರಣಗಳು; ಮತ್ತು

(iv) ಅರ್ಜಿದಾರನು ಕ್ಲೇಮು ಮಾಡುವ ಪರಿಹಾರ;

(3) 19ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿನ ಅಪೀಲು ವಿಚಾರಣಾ ಪ್ರಾಧಿಕಾರಿಯು ಅಪೀಲಿನ ವಿಚಾರಣೆಗಾಗಿ ಒಂದು ದಿನಾಂಕವನ್ನು ನಿಗದಿಪಡಿಸತಕ್ಕದ್ದು. ಅಪೀಲಿನ ವಿಚಾರಣೆಗಾಗಿ ನಿಗದಿಪಡಿಸಿದ ದಿನಾಂಕದಂದು ಅಥವಾ ಅಪೀಲನ್ನು ಮುಂದೂಡಬಹುದಾದ ಮುಂದಿನ ದಿನಾಂಕದಂದು ಅಪೀಲು ವಿಚಾರಣಾ ಪ್ರಾಧಿಕಾರಿಯು ಪಕ್ಷಕಾರರ ಅಹವಾಲು ಕೇಳಿದ ತರುವಾಯ ಅಪೀಲಿನ ಸಂಬಂಧದಲ್ಲಿ ತಾನು ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಮಾಡತಕ್ಕದ್ದು.

7. **19ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಅಪೀಲುಗಳ ಸಂಬಂಧದಲ್ಲಿ ಕಾರ್ಯವಿಧಾನ.**- 6ನೇ ನಿಯಮದ ಉಪಬಂಧಗಳು 19(3)ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಲಾದ ಅಪೀಲಿಗೆ ಯಥೋಚಿತ ಬದಲಾವಣೆಗಳೊಡನೆ ಅನ್ವಯವಾಗತಕ್ಕದ್ದು.

**ಅನುಸೂಚಿ**

| ಹುದ್ದೆಗಳ ವರ್ಗ | ನೇಮಕ ಮಾಡಲು ಅಧಿಕಾರ ಪಡೆದ ಪ್ರಾಧಿಕಾರಿ | ದಂಡ ವಿಧಿಸಲು ಅಧಿಕಾರ ಪಡೆದ ಪ್ರಾಧಿಕಾರಿ ಮತ್ತು ಆತ ವಿಧಿಸಬಹುದಾದ ದಂಡಗಳು | | ಅಪೀಲು ಪ್ರಾಧಿಕಾರಿ |
|---|---|---|---|---|
| | | ಪ್ರಾಧಿಕಾರಿ | ದಂಡಗಳು | |
| 1 | 2 | 3 | 4 | 5 |
| ಹಿರಿಯ ಶೀಘ್ರಲಿಪಿಗಾರರು/ ಶೀಘ್ರಲಿಪಿಗಾರರು/ ಹಿರಿಯ ಸಹಾಯಕರು/ ಸಹಾಯಕರು/ ಕಿರಿಯ ಸಹಾಯಕರು/ ವಾಹನ ಚಾಲಕರು ಮತ್ತು ಯಾವುದೇ ಇತರ ಗ್ರೂಪ್-ಸಿ ಹುದ್ದೆಗಳು | ರಾಜ್ಯ ಮಾಹಿತಿ ಆಯೋಗದ ಕಾರ್ಯದರ್ಶಿ | ರಾಜ್ಯ ಮಾಹಿತಿ ಆಯೋಗದ ಕಾರ್ಯದರ್ಶಿ<br><br>ಸಂಬಂಧಿಸಿದ ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ ಮಾತೃ ಇಲಾಖೆಯಲ್ಲಿ ಸಂಬಂಧಿಸಿದ ಶಿಸ್ತು ಪ್ರಾಧಿಕಾರ/ ಸಂಬಂಧಪಟ್ಟ ಸಾರ್ವಜನಿಕ ವಲಯಗಳ ಉದ್ದಿಮೆಗಳ ಮುಖ್ಯ ಕಾರ್ಯಕಾರಿ ಅಧಿಕಾರಿ | ಕ.ನಾ.ಸೇ. (ವ ನಿ ಅ) ನಿಯಮಗಳು, 1957ರ 8ನೇ ನಿಯಮದ (i) ರಿಂದ (ivಎ)ರ ವರೆಗೆ<br>ಕ.ಸಿ.ಸೇ (ವನಿಅ) ನಿಯಮಗಳು, 1957ರ 8ನೇ ನಿಯಮದ (v) ರಿಂದ (viii)ರ ವರೆಗೆ | ರಾಜ್ಯ ಮುಖ್ಯ ಮಾಹಿತಿ ಆಯುಕ್ತರು<br><br>ಸರ್ಕಾರದ ಮುಖ್ಯ ಕಾರ್ಯದರ್ಶಿ/ ಮಾತೃ ಇಲಾಖೆಯಲ್ಲಿ ಸಂಬಂಧಿಸಿದ ಅಪೀಲು ಪ್ರಾಧಿಕಾರ / ಸಂಬಂಧಿಸಿದ ಸಾರ್ವಜನಿಕ ವಲಯ ಉದ್ದಿಮೆಗಳ ಮಂಡಳಿ |
| ಆಪ್ತ ಕಾರ್ಯದರ್ಶಿ/ ಶಾಖಾಧಿಕಾರಿಗಳು / ಅಧೀನ ಕಾರ್ಯದರ್ಶಿ | ರಾಜ್ಯ ಮಾಹಿತಿ ಆಯೋಗದ ಕಾರ್ಯದರ್ಶಿ | ರಾಜ್ಯ ಮುಖ್ಯ ಮಾಹಿತಿ ಆಯುಕ್ತರು<br><br>ಸರ್ಕಾರ / ಮಾತೃ ಇಲಾಖೆಯಲ್ಲಿ ಸಂಬಂಧಿಸಿದ ಶಿಸ್ತು ಪ್ರಾಧಿಕಾರ / ಸಾರ್ವಜನಿಕ ವಲಯಗಳ ಸಂಬಂಧಿಸಿದ ಮುಖ್ಯ ಕಾರ್ಯಕಾರಿ | ಕ.ನಾ.ಸೇ. (ವನಿಅ) ನಿಯಮಗಳು, 1957ರ 8ನೇ ನಿಯಮದ (ii) ರಿಂದ (ivಎ)ರ ವರೆಗೆ<br>ಕ.ಸಿ.ಸೇ (ವನಿಅ) ನಿಯಮಗಳು, 1957ರ 8ನೇ ನಿಯಮದ (v) ರಿಂದ (viii)ರ ವರೆಗೆ | ಸರ್ಕಾರ<br><br>ರಾಜ್ಯಪಾಲರು / ಮಾತೃ ಇಲಾಖೆಯಲ್ಲಿ ಸಂಬಂಧಿಸಿದ ಅಪೀಲು ಪ್ರಾಧಿಕಾರ / ಸಂಬಂಧಿಸಿದ ಸಾರ್ವಜನಿಕ ಉದ್ದಿಮೆಗಳ ಮಂಡಳಿ |
| ಜವಾನರು / ಇತರ ಗ್ರೂಪ್-ಡಿ ನೌಕರರು | ಮಾಹಿತಿ ಆಯೋಗದ ಅಧೀನ ಕಾರ್ಯದರ್ಶಿ | ಮಾಹಿತಿ ಆಯೋಗದ ಅಧೀನ ಕಾರ್ಯದರ್ಶಿ<br><br>ಸಂಬಂಧಿಸಿದ ಮಾತೃ ಇಲಾಖೆಯ ನೇಮಕಾತಿ ಪ್ರಾಧಿಕಾರ | ಕ.ನಾ.ಸೇ.(ವನಿಅ) ನಿಯಮಗಳು, 1957ರ 8ನೇ ನಿಯಮದ (i)ರಿಂದ(ivಎ)ರವರೆಗೆ<br>ಕ.ಸಿ.ಸೇ(ವನಿಅ)ನಿಯಮಗಳು, 1957ರ 8ನೇ ನಿಯಮದ (v)ರಿಂದ(viii)ರವರೆಗೆ | ಮಾಹಿತಿ ಆಯೋಗದ ಕಾರ್ಯದರ್ಶಿ<br><br>ಮಾತೃ ಇಲಾಖೆಯಲ್ಲಿ ಸಂಬಂಧಿಸಿದ ಅಪೀಲು ಪ್ರಾಧಿಕಾರ |

**ನಮೂನೆ-ಎ**

**(ಮಾಪಹ ಅಧಿನಿಯಮ 2005ರ 7(1) ಮತ್ತು 6(1)ನೇ ಪ್ರಕರಣ)**

| | | |
|---|---|---|
| 1. | ಅರ್ಜಿದಾರನ ಪೂರ್ಣ ಹೆಸರು | : |
| 2. | ವಿಳಾಸ | : |
| 3. | ಕೋರಿದ ದಾಖಲೆ / ಪರಿಶೀಲನೆ / ಮಾದರಿಯ ವಿವರ | : |
| 4. | ಮೇಲಿನವು ಯಾವ ವರ್ಷಕ್ಕೆ ಸಂಬಂಧಿಸಿವೆ. | : |
| 5. | ಮಾಹಿತಿಯನ್ನು ಯಾವ ಸಾರ್ವಜನಿಕ ಮಾಹಿತಿ ಅಧಿಕಾರಿಯಿಂದ ಕೋರಿದೆಯೋ ಆ ಅಧಿಕಾರಿಯ ಪದನಾಮ ಮತ್ತು ವಿಳಾಸ | : |

ಸ್ಥಳ:

ದಿನಾಂಕ:

ಅರ್ಜಿದಾರನ ಸಹಿ

ಟಿ.ಎನ್.ಚತುರ್ವೇದಿ
ಕರ್ನಾಟಕ ರಾಜ್ಯದ ರಾಜ್ಯಪಾಲರು
ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಕೆ.ಆರ್. ಬಡಿಗೇರ್**
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಜನಸ್ಪಂದನಕೋಶ).

ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು.